ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರುರವರು ದಿನಾಂಕ 04-06-2013ರಂದು ಚಿಕ್ಕಬಳ್ಳಾಪುರ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ನೀಡಿದ ಸಲಹೆ & ಆದೇಶಗಳು.

1) **ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಗೌರಿಬಿದನೂರು:**

ಶೈಕ್ಷಣಿಕ ವರ್ಷ ಪ್ರಾರಂಭವಾಗಿದ್ದು ಎಲ್ಲಾ ಮಕ್ಕಳಿಗೆ ಪಠ್ಯ ಪುಸ್ತಕ, ಸಮವಸ್ತ್ರ ತಲುಪಿದೆಯೇ ಎಂಬುದರ ಬಗ್ಗೆ ಪರಿಶೀಲನೆ ನಡೆಸಿ, ಶಾಲೆಗಳಿಗೆ ಭೇಟಿ ನೀಡಲಾಯಿತು. ತಾಲ್ಲೂಕಿಗೆ ಸರಬರಾಜು ಆಗಬೇಕಾಗಿರುವ ಪುಸ್ತಕಗಳು, ಸರಬರಾಜು ಆಗಿರುವ ಪುಸ್ತಕಗಳು, ಶೀರ್ಷಿಕೆವಾರು ಮಾಹಿತಿ ಬಿಇಒ/ಬಿಆರ್‌ಸಿಗಳಿಗೆ ಇಲ್ಲ. ರಾಜ್ಯ ಕಛೇರಿಯಿಂದ ಕಳುಹಿಸಲಾದ ಇ-ಮೇಲ್ ಮಾಹಿತಿಯನ್ನು ಪ್ರತಿ ನಿತ್ಯ ಅಧಿಕಾರಿಗಳು ಗಮನ ಹರಿಸುವ ಪದ್ಧತಿಯನ್ನು ಕಡ್ಡಾಯವಾಗಿ ರೂಢಿಸಿಕೊಳ್ಳಬೇಕು.

**(ಕ್ರಮ- ಡಿಡಿಪಿಐ(ಆ)(ಆ)/ಬಿಇಒ/ಬಿಆರ್‌ಸಿ)**

2) ಕರ್ನಾಟಕ ರಕ್ಷಣಾವೇದಿಕೆ/ಕನ್ನಡ ಸಂಘಟನೆಗಳು ಖಾಸಗಿ ಶಾಲೆಗಳು ಡೊನೇಷನ್ ಹಾವಳಿ ಬಗ್ಗೆ ಕ್ರಮಕೈಗೊಳ್ಳುವಂತೆ ರಾಜ್ಯ ಯೋಜನಾ ನಿರ್ದೇಶಕರವರಿಗೆ ಮನವಿ ಪತ್ರವನ್ನು ಸಲ್ಲಿಸಿದರು. ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಯಿಸಿ ಅಧಿಕಾರಿಗಳಿಗೆ ಕೆಳಕಂಡಂತೆ ಆದೇಶಿಸಲಾಯಿತು.

- ಬಿಇಒರವರು ಅನಧಿಕೃತ ಶಾಲೆಗಳನ್ನು ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಸೂಚಿಸಲಾಯಿತು
- ಖಾಸಗಿ ಶಾಲೆಗಳಲ್ಲಿ ಆರ್‌ಟಿಇ(ಕಡ್ಡಾಯ ಶಿಕ್ಷಣ ಹಕ್ಕು) ನಿಯಮಗಳನ್ನು ಪ್ರಕಟಿಸಬೇಕು.
- ಬಿಇಒರವರು ಆರ್‌ಟಿಇ ಬಗ್ಗೆ ದೂರು ಸ್ವೀಕರಿಸಿದ ನಂತರ ಪರಿಶೀಲನೆಯಲ್ಲಿ ನೈಜಾಂಶ ಕಂಡುಬಂದಲ್ಲಿ ಅಂತಹ ಖಾಸಗಿ ಶಾಲೆಗಳ ಮೇಲೆ ಕಾನೂನಿನ ಪ್ರಕಾರ ಕ್ರಮಕೈಗೊಳ್ಳಬೇಕು.
- ಡೊನೇಷನ್ ಹಾವಳಿಯನ್ನು ಮಟ್ಟ ಹಾಕಲು ಉಪನಿರ್ದೇಶಕರು(ಆ)/ಬಿಇಒರವರು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಜಿಲ್ಲಾ ಮಟ್ಟದಲ್ಲಿ ಪೋಷಕರ, ಸಾರ್ವಜನಿಕ ಹಾಗೂ ಖಾಸಗಿ ಶಾಲಾ ಆಡಳಿತ ಮಂಡಳಿಯವರ ಸಭೆ ಕರೆದು ಶುಲ್ಕ ಸಂಗ್ರಹಿಸುವ ಬಗ್ಗೆ & ಆರ್‌ಟಿಇ ಬಗ್ಗೆ ಚರ್ಚಿಸಿ ಸುತ್ತೋಲೆಯನ್ನು ಹೊರಡಿಸುವಂತೆ ಕ್ರಮವಹಿಸಬೇಕು.

**(ಕ್ರಮ – ಡಿಡಿಪಿಐ(ಆ)/ಬಿಇಒ/ಡಿವೈಪಿಸಿ)**

3) **ಮೂರು ತಿಂಗಳ ವಸತಿರಹಿತ ಚಿಣ್ಣರ ಅಂಗಳ ಕೇಂದ್ರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗೌರಿಬಿದನೂರು ಕೋಟೆ:**

ಇಲ್ಲಿ 12 ಜನ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ತರಬೇತಿ ನೀಡಲು ಯೋಜಿಸಿದ್ದು, ಭೇಟಿಯ ಸಂದರ್ಭಕ್ಕೆ (10.30ಕ್ಕೆ)ಕೇಂದ್ರದಲ್ಲಿ ಒಂದು ಮಗು ಸಹ ಹಾಜರಿ ಇರಲಿಲ್ಲ. ನಂತರ ರಮ್ಯ D/o ಅಶ್ವತ್ಥಪ್ಪ ಎಂಬ ವಿದ್ಯಾರ್ಥಿಯನ್ನು ಕರೆತರಲಾಯಿತು. ಕೇಂದ್ರದಲ್ಲಿ ಹೊಂದಿದ ಮಾಹಿತಿಯಂತೆ ಈ ವಿದ್ಯಾರ್ಥಿನಿ 80 ದಿನಗಳಿಂದ ಶಾಲೆ ತೊರೆದಿರುವುದಾಗಿ ಇರುತ್ತದೆ. ಆದರೆ ಶಾಲೆಯಲ್ಲಿ ನಿರ್ವಹಿಸಿದ ದಾಖಲೆಯಂತೆ ದಿನಾಂಕ 23-12-2011 ರಿಂದ ಶಾಲೆ ತೊರೆದಿರುತ್ತದೆ. ಕೇಂದ್ರಕ್ಕೆ 5 ಮಕ್ಕಳನ್ನು ದಾಖಲಿಸಿಕೊಂಡಿರುವಂತೆ ಹಾಜರಾತಿ ನಿರ್ವಹಿಸಿರುತ್ತಾರೆ. ಕೇಂದ್ರದ ನಿರ್ವಹಣಾ

ಜವಾಬ್ದಾರಿ ಹೊಂದಿರುವ ಸಿಆರ್‌ಪಿ/ಬಿಆರ್‌ಸಿ/ಮುಖ್ಯಶಿಕ್ಷಕರು ನಿಗಧಿಪಡಿಸಿರುವ ಮಕ್ಕಳನ್ನು ಕೇಂದ್ರಕ್ಕೆ ಕರೆತರುವಲ್ಲಿ ವಿಫಲವಾಗಿರುವುದು ತುಂಬಾ ವಿಷಾದನೀಯ.

ಕೇಂದ್ರಕ್ಕೆ ಈವರೆಗೆ ಅನುದಾನ ಬಿಡುಗಡೆ ಮಾಡಿಲ್ಲ. ಮಕ್ಕಳಿಗೆ ಲೇಖನ ಸಾಮಗ್ರಿ ವಿತರಿಸಿರುವುದಿಲ್ಲ. ಕೇಂದ್ರಕ್ಕೆ ನಿಗದಿಪಡಿಸಿದ ಮಕ್ಕಳ ಸಂಖ್ಯೆ 12. ಹಾಜರಾತಿ ಸಂಖ್ಯೆ 05. ಇನ್ನುಳಿದ 07 ಮಕ್ಕಳ ವಿವರ ಎಲ್ಲಿದೆ? ಎಂದು ಸಂಬಂಧಿಸಿದ ಸಿಆರ್‌ಪಿ/ಬಿಆರ್‌ಸಿರವರಿಗೆ ಪ್ರಶ್ನಿಸಿದಾಗ ವಲಸೆ ಹೋಗಿರುವುದಾಗಿ ಮಾಹಿತಿ ನೀಡಿದ ನಂತರ ಸಿಆರ್‌ಪಿರವರು ಆ ಮಕ್ಕಳ ಹೆಸರನ್ನು ಚೈಲ್ಡ್ ಟ್ರ್ಯಾಕಿಂಗ್ ಸಾಫ್ಟ್‌ವೇರ್‌ನಲ್ಲಿ ಅಪ್‌ಡೇಟ್ ಮಾಡದಿರುವುದು ಕಂಡುಬಂದಿದೆ. ಒಟ್ಟಿನಲ್ಲಿ **ಚಿಣ್ಣರ ಅಂಗಳ ಕೇಂದ್ರದ ನಿರ್ವಹಣೆಯಲ್ಲಿ ಸಂಪೂರ್ಣ ಬೇಜವಾಬ್ದಾರಿ ತೋರಿರುವ ಸಿಆರ್‌ಪಿರವರನ್ನು ನಿಯಮಾನುಸಾರ ಅಮಾನತ್ತುಗೊಳಿಸಿ ಸಂಬಂಧಿಸಿದ ಬಿಆರ್‌ಸಿರವರಿಗೆ ಕಾರಣ ಕೇಳಿ ನೋಟೀಸ್ ಜಾರಿ ವರದಿ ಮಾಡಲು ಆದೇಶಿಸಲಾಯಿತು.**

**(ಕ್ರಮ – ಡಿಡಿಪಿಐ(ಆ) /ಡಿವೈಪಿಸಿ/ಬಿಇಒ)**

4) ಶಾಲೆಯಿಂದ ಹೊರಗುಳಿದ ವಲಸೆಹೋದ ಮಕ್ಕಳ ವಿವರವನ್ನು ಚೈಲ್ಡ್ ಟ್ರ್ಯಾಕಿಂಗ್ ಸಾಫ್ಟ್‌ವೇರ್‌ನಲ್ಲಿ ಕಾಲಕಾಲಕ್ಕೆ ಅಪ್‌ಲೋಡ್ ಮಾಡುವ ಬಗ್ಗೆ ಸಂಬಂಧಿಸಿದ ಸಿಬ್ಬಂದಿಯವರಿಗೆ ರಾಜ್ಯ ಕಛೇರಿಯಿಂದ ತರಬೇತಿ ಆಗಿದ್ದರೂ ಸಹ ಭೇಟಿ ಸಮಯದಲ್ಲಿ ಸಿಆರ್‌ಪಿಗಳು ಈ ಬಗ್ಗೆ ಕ್ರಮವಹಿಸದೆ ನಿರ್ಲಕ್ಷತೆ ತೋರಿರುವುದು ಕಂಡುಬಂದಿದೆ. ಈ ಬಗ್ಗೆ ತಕ್ಷಣ ಕ್ರಮವಹಿಸಿ ಕಾರ್ಯವನ್ನು ಪೂರ್ಣಗೊಳಿಸಿ ವರದಿ ಸಲ್ಲಿಸುವುದು.

**(ಕ್ರಮ– ಬಿಇಒ/ಬಿಆರ್‌ಸಿ/ಸಿಆರ್‌ಪಿ)**

5) ಶಾಲೆಯಿಂದ ಹೊರಗುಳಿದ ಮಕ್ಕಳ ಕಾರ್ಯತಂತ್ರ ಅನುಷ್ಠಾನದಲ್ಲಿ ಜಿಲ್ಲಾ ಹಂತದ ಅಧಿಕಾರಿಗಳು ಮೇಲುಸ್ತುವಾರಿ ವಹಿಸದೆ ನಿರ್ಲಕ್ಷತೆ ತೋರಿರುವುದು ಮೇಲ್ನೋಟಕ್ಕೆ ಸಾಬೀತುಪಡಿಸುತ್ತದೆ. ಕೂಡಲೆ ಸಂಬಂಧಿಸಿದ ಡಿವೈಪಿಸಿ/ಎಪಿಸಿ ರವರು ಜಿಲ್ಲಾದ್ಯಂತ ಕ್ಷೇತ್ರಭೇಟಿ ಮಾಡಿ ಸಂಪೂರ್ಣ ವರದಿಯನ್ನು ರಾಜ್ಯ ಕಛೇರಿಗೆ ಒಂದು ವಾರದೊಳಗೆ ಕಳುಹಿಸಲು ಆದೇಶಿಸಲಾಯಿತು.

**(ಕ್ರಮ –ಡಿಡಿಪಿಐ(ಆ)/ಡಿವೈಪಿಸಿ/ಎಪಿಸಿ)**

6) **ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗೌರಿಬಿದನೂರು ಕೋಟೆ:**

ಈ ಶಾಲೆಗೆ ಭೇಟಿ ನೀಡಿ ಪರಿಶೀಲಿಸಲಾಗಿ ಪಠ್ಯಪುಸ್ತಕ ಮತ್ತು ಸರ್ವ ಶಿಕ್ಷಣ ಅಭಿಯಾನ ವತಿಯಿಂಧ ನೀಡಲಾದ 2ನೇ ಸೆಟ್ ಸಮವಸ್ತ್ರ ಸರಬರಾಜು ಆಗಿದ್ದು ವಿತರಿಸಿರುತ್ತಾರೆ. ಆದರೆ ಇವುಗಳ ದಾಸ್ತಾನು ಮತ್ತು ವಿತರಣೆಯ ವಹಿಯನ್ನು ಕ್ರಮವಾಗಿ ನಿರ್ವಹಿಸಿರುವುದಿಲ್ಲ. ಹಳೆ ಶಾಲಾ ಕೊಠಡಿಯನ್ನು ಕೆಡವಲು ಹರಾಜು ಮಾಡಿರುತ್ತಾರೆ. ಇದರಿಂದ ಸಂದಾಯವಾದ ಹಣವನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡದೆ ಇನ್ನು ಎಸ್‌ಡಿಎಂಸಿ ಖಾತೆಯಲ್ಲಿಯೇ ಉಳಿಸಿಕೊಂಡಿರುತ್ತಾರೆ. ಈ ಬಗ್ಗೆ ಮುಖ್ಯ ಶಿಕ್ಷಕರಿಗೆ ಅಗತ್ಯ ಮಾರ್ಗದರ್ಶನ ಇರುವುದಿಲ್ಲ. ಬಿಸಿ ಊಟದ ಅಡಿಗೆ ಕೋಣೆ ಸ್ವಚ್ಚತೆಯಿಂದ ಕೂಡಿರುವುದಿಲ್ಲ.

**(ಕ್ರಮ – ಬಿಇಒ/ಬಿಆರ್‌ಸಿ)**

7) ಸಿವಿಲ್ ಕಾಮಗಾರಿಗಳನ್ನು ಪರಿಶೀಲನೆ ಮಾಡಿದಾಗ ಜಿಲ್ಲೆಯಲ್ಲಿ ಇನ್ನೂ

| | | |
|---|---|---|
| ಉನ್ನತೀಕರಿಸಿದ 8ನೇ ತರಗತಿ ಕೊಠಡಿ | – | 16 |
| ಹೆಚ್ಚುವರಿ ಶಾಲಾ ಕೊಠಡಿ | – | 6 |
| ಹೆಚ್ಚುವರಿ ಶಾಲಾ ಕೊಠಡಿ | – | 4 |
| ಸಿಡಬ್ಲ್ಯೂಎಸ್ಎನ್ ಶೌಚಾಲಯ | – | 19 |
| ರ್‍ಯಾಂಪ್ಸ್ | – | 32 |

ಕಾಮಗಾರಿಗಳನ್ನು ಪ್ರಾರಂಭಿಸದೇ ಇರುವುದನ್ನು ಪರಿಶೀಲಿಸಲಾಗಿ ಸಂಬಂಧಿಸಿದ ಜಿಲ್ಲಾ ಇಂಜಿನಿಯರ್/ಬ್ಲಾಕ್ ಇಂಜಿನಿಯರ್/ಬಿಆರ್‌ಸಿ/ಬಿಇಒ/ಡಿವೈಪಿಸಿ ರವರು ಕೂಡಲೆ ಕ್ರಮವಹಿಸಿ ರಾಜ್ಯ ಕಛೇರಿಗೆ ಹತ್ತು ದಿನಗಳೊಳಗೆ ವರದಿ ಮಾಡಲು ಆದೇಶಿಸಲಾಯಿತು.

**(ಕ್ರಮ –ಡಿಡಿಪಿಐ(ಆ)/ಡಿವೈಪಿಸಿ/ಜಿಲ್ಲಾ ಇಂಜಿನಿಯರ್/ಬ್ಲಾಕ್ ಇಂಜಿನಿಯರ್/ ಕಾರ್ಯಪಾಲಕ ಅಭಿಯಂತರರು, ಎಸ್‌ಎಸ್‌ಎ)**

**8) ಕೆಜಿಬಿವಿ, ವಿದುರಾಶ್ವತ್ಥ**

ಈ ಶಾಲೆಯಲ್ಲಿನ ಮುಖ್ಯಸ್ಥರಿಗೆ ಈ ದಿನ ತರಗತಿವಾರು ಎಷ್ಟು ಮಕ್ಕಳು ಹಾಜರಿರುತ್ತಾರೆ. ಯಾವ ಕೊಠಡಿಯಲ್ಲಿ ಯಾವ ತರಗತಿ ಮಕ್ಕಳು ಕಲಿಯುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ಇಲ್ಲ. ಸದರಿ ಶಾಲೆಯಲ್ಲಿ ಯಾವ ಮಕ್ಕಳನ್ನು ದಾಖಲು ಮಾಡಿಕೊಳ್ಳಬೇಕು ಎಂಬ ಬಗ್ಗೆ ಅರಿವಿಲ್ಲ. ಹೊರಗಿನ ಜಿಲ್ಲಾ ಮಕ್ಕಳನ್ನು ಪ್ರಥಮ ಆದ್ಯತೆಯಲ್ಲಿ ದಾಖಲು ಮಾಡಿಕೊಂಡಿರುತ್ತಾರೆ. ಶಾಲೆ ನಿರ್ವಹಣೆ ತೃಪ್ತಿಕರವಾಗಿಲ್ಲ. ಹೊರಗುತ್ತಿಗೆದಾರರ ಪ್ರಭಾವ ಶಾಲೆಯ ಮೇಲಿರುವುದು ಕಡುಬಂದಿದೆ. ವಿವರವಾದ ತನಿಖೆ ನಡೆಸಿ ವರದಿ ಸಲ್ಲಿಸುವುದು.

**(ಕ್ರಮ –ಡಿಡಿಪಿಐ(ಆ)/ಡಿವೈಪಿಸಿ/ಬಿಇಒ)**

**9) ಆದರ್ಶ ವಿದ್ಯಾಲಯ, ಗೌರಿಬಿದನೂರು:**

ಶಾಲೆಗೆ ಭೇಟಿ ನೀಡಲಾಗಿ, ವಿದ್ಯಾರ್ಥಿಗಳೊಂದಿಗೆ ಸಂದರ್ಶಿಸಿ ಕಲಿಕೆಯ ಪ್ರಗತಿಯನ್ನು ಪರಿಶೀಲಿಸಲಾಯಿತು. English Medium ಶಾಲೆಯಾದ್ದರಿಂದ ತರಬೇತಿ ಹೊಂದಿದ ನುರಿತ ಶಿಕ್ಷಕರನ್ನು ಶಾಲೆಗೆ ನಿಯೋಜಿಸಲು ತಿಳಿಸಲಾಯಿತು. ಶಾಲಾ ತಪಾಸಣೆ ಸಂದರ್ಭದಲ್ಲಿ 9ನೇ ತರಗತಿಯಲ್ಲಿ 69, 8ನೇ ತರಗತಿಯಲ್ಲಿ 78, 7ನೇ ತರಗತಿಯಲ್ಲಿ 78 ಹಾಗೂ 6ನೇ ತರಗತಿಯಲ್ಲಿ 6 ಹೊಸ ದಾಖಲಾತಿಯಾಗಿರುವುದನ್ನು ಗಮನಿಸಲಾಯಿತು.

ವಿಶೇಷವಾಗಿ ಇಲಾಖೆಯ ಶಿಕ್ಷಕರ ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಶಾಲಾ ದಾಖಲಾತಿಗಾಗಿ ಅರ್ಹತಾ ಪರೀಕ್ಷೆಗೆ ದಾಖಲು ಮಾಡುತ್ತಿರುವುದು ಕಂಡುಬಂದಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಸಮುದಾಯದ ಜನರಿಗೆ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆದರ್ಶ ವಿದ್ಯಾಲಯ ಶಾಲೆಗಳ ಬಗ್ಗೆ ಪ್ರಚಾರವನ್ನು ಕೈಗೊಳ್ಳುವಂತೆ ಇಲಾಖೆಯ ಎಲ್ಲಾ ಸ್ಥರದ ಅಧಿಕಾರಿಗಳು ಕ್ರಮವಹಿಸುವುದು.

ಸರ್ಕಾರಿ ಶಾಲೆಗಳಲ್ಲಿ ಉಚಿತವಾಗಿ ನೀಡಲಾಗುತ್ತಿರುವ ಪಠ್ಯ ಪುಸ್ತಕ, ಬೈಸಿಕಲ್, ಸಮವಸ್ತ್ರ ಇತ್ಯಾದಿ ಸೌಲಭ್ಯಗಳನ್ನು ಸಹ ಆದರ್ಶ ವಿದ್ಯಾಲಯದ ಮಕ್ಕಳಿಗೂ ಲಭಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

(ಕ್ರಮ –ಡಿಡಿಪಿಐ(ಆ)/ಡಿವೈಪಿಸಿ/ಬಿಇಒ/ಬಿಆರ್‌ಸಿ)

**10) ಆದರ್ಶ ಶಾಲಾ ಕಟ್ಟಡ ಶಾಲಾ ಕಾಮಗಾರಿ:**

ರಾಜ್ಯ ಹಂತದಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಏಜೆನ್ಸಿಯನ್ನು ಸಹ ಗುರುತಿಸಲಾಗಿದ್ದು, ಇನ್ನೂ ಕಾಮಗಾರಿ ಪ್ರಾರಂಭವಾಗದೇ ಇರುವುದನ್ನು ಪರಿಶೀಲಿಸಲಾಗಿ, ತಕ್ಷಣ ಕಾರ್ಯಪಾಲಕ ಅಭಿಯಂತರವರು 3 ದಿನಗಳಲ್ಲಿ ಕಾಮಗಾರಿಯನ್ನು ಪ್ರಾರಂಭಿಸುವಲ್ಲಿ ಕ್ರಮಕೈಗೊಳ್ಳಬೇಕು.

**(ಕ್ರಮ-ಕಾರ್ಯಪಾಲಕ ಅಭಿಯಂತರರು ಎಸ್‌ಎಸ್‌ಎ/ಡಿಡಿಪಿಐ(ಆ)/ಬಿಇಒ)**

16.6.17

ರಾಜ್ಯ ಯೋಜನಾ ನಿರ್ದೇಶಕರು,
ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ
ಅಭಿಯಾನ, ಬೆಂಗಳೂರು.

**ಪ್ರತಿಯನ್ನು ಅವಗಾಹನೆಗೆ ಸಲ್ಲಿಸಿದೆ;**

1) ಸರ್ಕಾರದ ಕಾರ್ಯದರ್ಶಿಗಳು, ಪ್ರಾ & ಪ್ರೌ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

**ಇವರಿಗೆ,**

1) ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.
2) ಡಿವೈಪಿಸಿ, ಚಿಕ್ಕಬಳ್ಳಾಪುರ ಜಿಲ್ಲೆ
3) ಬಿಇಒ/ಬಿಆರ್‌ಸಿ, ಗೌರಿಬಿದನೂರು
4) ಮುಖ್ಯ ಶಿಕ್ಷಕರು, ಹಿರಿಯ ಪ್ರಾಥಮಿಕ ಶಾಲೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಆವರಣ, ಗೌರಿಬಿದನೂರು
5) ಮುಖ್ಯ ಶಿಕ್ಷಕರು, ಆದರ್ಶ ವಿದ್ಯಾಲಯ, ಗೌರಿಬಿದನೂರು ತಾ, ಚಿಕ್ಕಬಳ್ಳಾಪುರ ಜಿಲ್ಲೆ.
6) ಪ್ರಾಂಶುಪಾಲರು, ಕೆಜಿಬಿವಿ, ವಿದುರಾಶ್ವತ್ಥ, ಗೌರಿಬಿದನೂರು ತಾ, ಚಿಕ್ಕಬಳ್ಳಾಪುರ ಜಿಲ್ಲೆ.
7) ರಾಜ್ಯ ಕಛೇರಿಯಿಂದ ನೇಮಕಗೊಂಡಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ನೋಡಲ್ ಅಧಿಕಾರಿಯವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
8) ಕಾರ್ಯಪಾಲಕ ಅಭಿಯಂತರರು, ಎಸ್.ಎಸ್.ಎ, ರಾಜ್ಯ ಕಛೇರಿ– ಮುಂದಿನ ಸೂಕ್ತ ಕ್ರಮಕ್ಕಾಗಿ.
9) ಸಹನಿರ್ದೇಶಕರು(ಆಡಳಿತ), ಎಸ್.ಎಸ್.ಎ, ಬೆಂಗಳೂರು.
10) ಕಛೇರಿ ಪ್ರತಿ.